# ಕನ್ನಡ ವಿಶ್ವವಿದ್ಯಾಲಯ,ಹಂಪಿ

## ವಿದ್ಯಾರಣ್ಯ-೫೮೩ ೨೭೬

### ಮಾರ್ಚ್ ೯, ೨೦೧೮ರ ಶುಕ್ರವಾರದಂದು ನಡೆದ ವಿಶೇಷ ಕಾರ್ಯಕಾರಿ ಸಮಿತಿ ೧೯೨ನೇ ಸಭೆಯ ನಡವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಶ್ರೀ ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ | : ಸದಸ್ಯರು |
| ೦೩. ಪ್ರೊ. ಎ.ವಿ. ನಾವಡ, ಮಂಗಳೂರು | : ಸದಸ್ಯರು |
| ೦೪. ಪ್ರೊ. ಸಿದ್ಧಲಿಂಗಯ್ಯ, ಬೆಂಗಳೂರು | : ಸದಸ್ಯರು |
| ೦೫. ಡಾ. ಓ. ಓಬಯ್ಯ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | : ಸದಸ್ಯರು |
| ೦೬. ಶ್ರೀಮತಿ ಮಹಾದೇವಿ ಗೋಕಾಕ್, ವಿಜಯಪುರ | : ಸದಸ್ಯರು |
| ೦೭. ಶ್ರೀ ಸರಜೂ ಕಾಟ್ಕರ್, ಬೆಳಗಾವಿ | : ಸದಸ್ಯರು |
| ೦೮. ಡಾ. ಎ ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೯. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೦. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೧. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೨. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೧೩. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಡಾ. ವೀರಣ್ಣ ರಾಜೂರ, ಧಾರವಾಡ | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೬. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**೧೯೨.೦೧. ದಿನಾಂಕ ೧೦.೦೩.೨೦೧೮ರಂದು ನಡೆಯಲಿರುವ ೨೬ನೇ ನುಡಿಹಬ್ಬ (ಘಟಿಕೋತ್ಸವ)ದಲ್ಲಿ ಪಡೆಯುವ ವಿವಿಧ ಕೋರ್ಸ್‌ಗಳ ಪದವಿಗಳಿಗೆ ಅನುಮೋದನೆ ಕೋರಿದೆ.**

ನಿರ್ಣಯ: ೧. ಅಧ್ಯಯನಾಂಗದ-೨೯೯ ಪದವಿ, ೨. ದೂರಶಿಕ್ಷಣ ನಿರ್ದೇಶನಾಲಯದ-೬೫೪ ಪದವಿ, ಹಾಗೂ-೫೬ ಡಿಪ್ಲೊಮಾ ಪದವಿ ಹಾಗೂ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ೫೦೩ ಪದವಿಗಳಿಗೆ ಸಮಿತಿ ಅನುಮೋದನೆ ನೀಡಿತು.

**೧೯೨.೦೨. ದಿನಾಂಕ ೧೦.೦೩.೨೦೧೮ ಮತ್ತು ೧೧.೦೩.೨೦೧೮ರಂದು ನಡೆಯಲಿರುವ ನುಡಿಹಬ್ಬದ ಘಟಿಕೋತ್ಸವ, ವಿಚಾರ ಸಂಕಿರಣ ಹಾಗೂ ನಮ್ಮ ಹಬ್ಬದ ಕಾರ್ಯಕ್ರಮಗಳ ಪ್ರಕ್ರಿಯೆಗಳಿಗೆ ಹಾಗೂ ಇವುಗಳ ಖರ್ಚುವೆಚ್ಚಗಳಿಗೆ ಅನುಮೋದನೆ ಕೋರಿದೆ.**

ನಿರ್ಣಯ: ದಿನಾಂಕ ೦೯.೦೩.೨೦೧೮ ರಿಂದ ೧೧.೦೩.೨೦೧೮ರವರೆಗೆ ನಡೆಯಲಿರುವ ೨೬ನೇ ನುಡಿಹಬ್ಬ/ಘಟಿಕೋತ್ಸವ, ವಿಚಾರ ಸಂಕಿರಣ ಹಾಗೂ ನಮ್ಮ ಹಬ್ಬದ ಕಾರ್ಯಕ್ರಮಗಳ ಪ್ರಕ್ರಿಯೆಗಳಿಗೆ ಹಾಗೂ ಇವುಗಳ ಖರ್ಚುವೆಚ್ಚಗಳಿಗೆ ಸಮಿತಿ ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೧೯೨.೦೩. **ಹಸ್ತಪ್ರತಿ ಸಂಪನ್ಮೂಲ ಕೇಂದ್ರ (ಎಂಆರ್‌ಸಿ) ಹಾಗೂ ಹಸ್ತಪ್ರತಿ ಸಂರಕ್ಷಣಾ ಕೇಂದ್ರ (ಎಂಸಿಸಿ) ಯೋಜನೆ ಎಂಓಯು ಕುರಿತು.**

ನಿರ್ಣಯ: ಹಸ್ತಪ್ರತಿ ಸಂಪನ್ಮೂಲ ಕೇಂದ್ರ (ಎಂಆರ್‌ಸಿ) ಹಾಗೂ ಹಸ್ತಪ್ರತಿ ಸಂರಕ್ಷಣಾ ಕೇಂದ್ರ (ಎಂಸಿಸಿ) ಯೋಜನೆಯ ಎಂಓಯು ಕುರಿತಂತೆ ಸಭೆಯು ಚರ್ಚಿಸಿ ವ್ಯಕ್ತಿಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ಬದಲು ವಿಶ್ವವಿದ್ಯಾಲಯದ ಕುಲಸಚಿವರ ಹೆಸರಿನಲ್ಲಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡು ನಂತರ ಸಂಬಂಧಿಸಿದ ವಿಭಾಗದ ಮುಖ್ಯಸ್ಥರಿಗೆ ಯೋಜನೆಯ ನಿರ್ವಹಣೆಯನ್ನು ಒಪ್ಪಿಸುವುದು ಎಂದು ಸಭೆ ನಿರ್ಣಯಿಸಿತು.

ದೆಹಲಿಯ ಜೆ.ಎನ್.ಯು. ಸಂಸ್ಥೆಗೆ ಹಾಗೂ ಶಾಂತಿನಿಕೇತನಕ್ಕೆ ವಿಶ್ವವಿದ್ಯಾಲಯದ ಪ್ರತಿನಿಧಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಒಮ್ಮೆ ಭೇಟಿ ನೀಡಲು ಸಭೆ ನಿರ್ಣಯಿಸಿತು.

**೧೯೨.೦೪. ೨೦೧೭-೧೮ರಲ್ಲಿ ಅರ್ಜಿ ಆಹ್ವಾನಿಸಿರುವ ಬೋಧಕ, ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿ ಸಾಕಷ್ಟು ಅರ್ಜಿಗಳು ಸಲ್ಲಿಸದಿರುವ ಹುದ್ದೆಗಳಿಗೆ ಮತ್ತು ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಮರು ಜಾಹಿರಾತು ಕುರಿತು.**

ನಿರ್ಣಯ: ೨೦೧೭-೧೮ರಲ್ಲಿ ಅರ್ಜಿ ಆಹ್ವಾನಿಸಿರುವ ಬೋಧಕ, ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿ ಸಾಕಷ್ಟು ಅರ್ಜಿಗಳು ಸಲ್ಲಿಸದಿರುವ ಹುದ್ದೆಗಳಿಗೆ ಮತ್ತು ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಮರು ಜಾಹಿರಾತು ಕುರಿತು ಸಭೆಯು ಚರ್ಚಿಸಿ ಈಗಾಗಲೇ ಸಲ್ಲಿಸಿರುವ ಅರ್ಜಿಗಳಲ್ಲಿ ಅರ್ಹ ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಮಾಡಲು ಮತ್ತು ಸಂದರ್ಶನದ ಮೂಲಕ ಆಯ್ಕೆಮಾಡಿ ನೇಮಕಾತಿ ಮಾಡಿಕೊಳ್ಳಲು ಸಭೆ ಅನುಮೋದನೆ ನೀಡಿತು.

ಮಿಕ್ಕುಳಿದ ವೃಂದದ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿ ಮರು ಜಾಹೀರಾತನ್ನು ಸ್ಥಳೀಯ, ರಾಜ್ಯವ್ಯಾಪ್ತಿ ಹಾಗೂ ಸುದ್ದಿಮೂಲ ಪತ್ರಿಕೆಗಳಿಗೆ ಜಾಹೀರಾತನ್ನು ನೀಡಿ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಸಭೆ ಸೂಚಿಸಿತು.

ನೇಮಕಾತಿ ಮಂಡಳಿಗೆ ಸಂಬಂಧಿಸಿ ಈಗಾಗಲೇ ರಚನೆಯಾಗಿ ಕುಲಾಧಿಪತಿಗಳಿಂದ ಅನುಮೋದನೆಯಾಗಿರುವ ಸಿಎಎಸ್ ಮುಂಬಡ್ತಿ ಸಮಿತಿಯ ಪಟ್ಟಿಯನ್ನು ಪರಿಗಣಿಸಲು ಹಾಗೂ ಈ ಪಟ್ಟಿಯಲ್ಲಿ ನಿವೃತ್ತರಾಗಿರುವ ಸದಸ್ಯರ ಬದಲಿಗೆ ಸೂಕ್ತ ತಜ್ಞರನ್ನು ನೇಮಿಸಲು ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಬೋಧಕ, ಬೋಧಕೇತರ ಹುದ್ದೆಗಳ ಆಯ್ಕೆಗೆ ಸಂಬಂಧಿಸಿ ಮಂಡಿಸಲ್ಪಟ್ಟ ತಜ್ಞ ಸಮಿತಿಯ ಪಟ್ಟಿಗೆ ಸಭೆ ಒಪ್ಪಿಗೆ ನೀಡಿತು.

**೧೯೨.೦೫. ಕನ್ನಡ ವಿಶ್ವವಿದ್ಯಾಲಯದ ಬೋಧಕೇತರ ಹುದ್ದೆಗಳ ಮೇಲ್ದರ್ಜೆಗೇರಿಸುವ ಬಗ್ಗೆ.**

ನಿರ್ಣಯ: ಕನ್ನಡ ವಿಶ್ವವಿದ್ಯಾಲಯದ ಬೋಧಕೇತರ ಹುದ್ದೆಗಳ ಮೇಲ್ದರ್ಜೆಗೇರಿಸುವ ಬಗ್ಗೆ ಸಭೆಯು ಚರ್ಚಿಸಿ ವಿದ್ಯಾರ್ಹತೆ ಹೊಂದಿರದ ಮುಂದಿನ ಹುದ್ದೆಯ ವೇತನ ಶ್ರೇಣಿಯನ್ನು ತಲುಪಿದ ಸಿಬ್ಬಂದಿಗಳ ಹುದ್ದೆಗಳನ್ನು ಹೊಸದಾಗಿ ಮುಂಬಡ್ತಿ ಸಮಿತಿ ರಚಿಸಿ ಸದರಿ ಸಭೆಯ ಅನುಮೋದನೆ ಪಡೆದು ಷರತ್ತುಗಳನ್ನು ವಿಧಿಸಿ ಮೇಲ್ದರ್ಜೆಗೇರಿಸಲು ಸಭೆ ಅನುಮೋದನೆ ನೀಡಿತು. ವಿಶ್ವವಿದ್ಯಾಲಯದ ಸಿಬ್ಬಂದಿಯು ಮುಕ್ತ ವಿಶ್ವವಿದ್ಯಾಲಯದ ಎಂ.ಎ. ಪದವಿಯನ್ನು ಮುಂಬಡ್ತಿಗೆ ಪರಿಗಣಿಸಲು ಕೋರಿರುವ ಸಂಬಂಧ, ಮುಕ್ತ ವಿಶ್ವವಿದ್ಯಾಲಯದ ಬಿ.ಎ., ಮತ್ತು ಎಂ.ಎ. ಪದವಿ ನೇಮಕಾತಿ/ಮುಂಬಡ್ತಿಗೆ ಅರ್ಹತೆ ಇದೆಯೇ ಎಂಬ ಬಗ್ಗೆ ಸಿಬ್ಬಂದಿಯ ಬೇಡಿಕೆ ಅರ್ಜಿಯ ಸಮೇತವಾಗಿ ಸರ್ಕಾರಕ್ಕೆ ಪತ್ರ ಬರೆದು ವಿವರಣೆಯನ್ನು ಪಡೆಯಲು ಸಭೆ ಸೂಚಿಸಿತು.

**೧೯೨.೦೬. ನ್ಯಾಕ್ ವರದಿಗೆ ಅವಶ್ಯವಿರುವ ವಿಶ್ವವಿದ್ಯಾಲಯದ ಸಂಶೋಧನಾ ಸಂಬಂಧಿ ಪಾಲಿಸಿಗಳನ್ನು ಪುಸ್ತಿಕೆ (ಬುಕ್‌ಲೆಟ್) ರೂಪದಲ್ಲಿ ಹೊರತರಲು (ಅಧ್ಯಾಪಕರು, ವಿದ್ಯಾರ್ಥಿಗಳ ಗಮನಕ್ಕೆ ತರಲು) ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

ನಿರ್ಣಯ: ನ್ಯಾಕ್ ವರದಿಗೆ ಅವಶ್ಯವಿರುವ ವಿಶ್ವವಿದ್ಯಾಲಯದ ಸಂಶೋಧನಾ ಸಂಬಂಧಿ ಪಾಲಿಸಿಗಳನ್ನು ಪುಸ್ತಿಕೆ (ಬುಕ್‌ಲೆಟ್) ರೂಪದಲ್ಲಿ ಹೊರತರಲು (ಅಧ್ಯಾಪಕರು, ವಿದ್ಯಾರ್ಥಿಗಳ ಗಮನಕ್ಕೆ ತರಲು) ಹಾಗೂ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ಕುರಿತು ಸಮಿತಿಯು ಚರ್ಚಿಸಿ ಅನುಮೋದನೆ ನೀಡಿತು.

**೧೯೨.೦೭. ಡಾ. ರಾಜಪ್ಪ ದಳವಾಯಿ, ಹಿರಿಯ ಪ್ರಾಧ್ಯಾಪಕರು, ಕನ್ನಡ ವಿಭಾಗ ಪಿ.ಜಿ.ಸೆಂಟರ್, ಕೋಲಾರ ಇವರು ಸಲ್ಲಿಸಿರುವ ಜನ್ನನ 'ಯಶೋಧರ ಚರಿತ್ರೆ' ಹಳಗನ್ನಡ ಕಾವ್ಯವನ್ನು ಬಹುಮಾಧ್ಯಮಕ್ಕೆ ಅಳವಡಿಸುವ ಯೋಜನೆಯ ಪ್ರಸ್ತಾವ ಮತ್ತು ಅಂದಾಜು ವೆಚ್ಚ ರೂ. ೯,೯೫,೦೦೦.೦೦/-ಗಳಿಗೆ ಅನುಮೋದನೆ ಕೋರಿದೆ.**

ನಿರ್ಣಯ: ಡಾ. ರಾಜಪ್ಪ ದಳವಾಯಿ, ಹಿರಿಯ ಪ್ರಾಧ್ಯಾಪಕರು, ಕನ್ನಡ ವಿಭಾಗ ಪಿ.ಜಿ.ಸೆಂಟರ್, ಕೋಲಾರ ಇವರು ಸಲ್ಲಿಸಿರುವ ಜನ್ನನ 'ಯಶೋಧರ ಚರಿತ್ರೆ' ಹಳಗನ್ನಡ ಕಾವ್ಯವನ್ನು ಬಹುಮಾಧ್ಯಮಕ್ಕೆ ಅಳವಡಿಸುವ ಯೋಜನೆಯ ಪ್ರಸ್ತಾವ ಮತ್ತು ಅಂದಾಜು ವೆಚ್ಚ ರೂ. ೯,೯೫,೦೦೦.೦೦/-ಗಳ ಕುರಿತು ಕುಲಸಚಿವರು ಸಭೆಗೆ ಮಂಡಿಸಿದರು. ಸಭೆಯು ಇದನ್ನು ಪರಿಶೀಲಿಸಿ ಸದರಿಯವರು ತಮ್ಮ ವಿಶ್ವವಿದ್ಯಾಲಯದ (ಮಾತೃ ಇಲಾಖೆಯ)ಮೂಲಕ ಸದರಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಭೆ ಸೂಚಿಸಿತು.

**೧೯೧.೦೮. ಶ್ರೀ ಎಸ್.ಎಸ್. ಪೂಜಾರ ಇವರ ಪತ್ರ ಕುರಿತು.**

ನಿರ್ಣಯ: ಶ್ರೀ ಎಸ್.ಎಸ್. ಪೂಜಾರ ಇವರ (ಪತ್ರಿಕಾ ಜಾಹೀರಾತು)ಪತ್ರದ ಕುರಿತು ಕುಲಸಚಿವರು ಸಭೆಗೆ ಓದಿ ಮಂಡಿಸಿದರು. ಈ ಸಂಬಂಧ ಸಭೆಯು ಪರಿಶೀಲಿಸಿ ಈ ಕಳಗಿನಂತೆ ತೀರ್ಮಾನಿಸಿತು.

೧. ಚಿಕ್ಕಣ್ಣ ಎಣ್ಣೆಕಟ್ಟೆ ಮತ್ತು ಎಫ್.ಟಿ. ಹಳ್ಳಿಕೇರಿ ಇವರಿಂದ ವಿವರಣೆ ಪಡೆಯುವುದು.

೨. ಸದರಿಯವರು ನಡೆಸುತ್ತಿರುವ ಧರಣಿ ಕುರಿತು ನುಡಿಹಬ್ಬದ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆ ಇವರಿಗೆ ಪತ್ರ ಬರೆದು ಮಾಹಿತಿ ನೀಡುವುದು.

೩. ಮುಂದಿನ ದಿನಗಳಲ್ಲಿ ಈ ಪುಸ್ತಕ ಗೊಂದಲಗಳು ಬಗೆಹರಿಯುವವರೆಗೆ ಪ್ರಕಟಣೆ ತಡೆಯಿಡಿಯಲು ಸೂಚಿಸಿತು.

೧೯೨.೦೯. ಡಾ. ಜಂಬಯ್ಯ ಸ್ವಾಮಿ ಹಿರೇಮಠ, ವಕೀಲರು, ಗುಲಬರ್ಗಾ ಇವರು ಕನ್ನಡ ವಿಶ್ವವಿದ್ಯಾಲಯದ **Panel Advocate** ಆಗಿ ನೇಮಿಸಿಕೊಳ್ಳಲು ಮನವಿ ಸಲ್ಲಿಸಿರುವ ಕುರಿತು.

ನಿರ್ಣಯ: ಡಾ. ಜಂಬಯ್ಯ ಸ್ವಾಮಿ ಹಿರೇಮಠ, ವಕೀಲರು, ಗುಲಬರ್ಗಾ ಇವರು ಕನ್ನಡ ವಿಶ್ವವಿದ್ಯಾಲಯದ Panel Advocate ಆಗಿ ನೇಮಿಸಿಕೊಳ್ಳಲು ಮನವಿಯನ್ನು ಸಭೆಯು ಪರಿಶೀಲಿಸಿ ಸಂದರ್ಭ ಬಂದಾಗ ಅವಶ್ಯವಿದ್ದಲ್ಲಿ ಅವರ ಸೇವೆಯನ್ನು ಬಳಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

೧೯೨.೧೦. **ದಿನಾಂಕ ೦೫.೦೩.೨೦೧೮ರಂದು ನಡೆದ ಖರೀದಿ ಸಮಿತಿ ಸಭೆಯ ನಡವಳಿಗೆ ಅನುಮೋದನೆ ಕೋರಿ.**

ನಿರ್ಣಯ: ದಿನಾಂಕ ೦೫.೦೩.೨೦೧೮ರಂದು ನಡೆದ ಖರೀದಿ ಸಮಿತಿ ಸಭೆಯ ನಡವಳಿಗೆ ಸಭೆ ಅನುಮೋದನೆ ನೀಡಿತು.

೧೯೨.೧೧. **ದಿನಾಂಕ ೦೫.೦೩.೨೦೧೮ರಂದು ಪಜಾ/ಪಪಂ ವಿಶೇಷ ಘಟಕದ ೨೦೧೭-೧೮ನೇ ಸಾಲಿನ ಸಲಹಾ ಸಮಿತಿ ಸಭೆಯ ನಡವಳಿಗೆ ಅನುಮೋದನೆ ಕೋರಿ.**

ನಿರ್ಣಯ: ದಿನಾಂಕ ೦೫.೦೩.೨೦೧೮ರಂದು ಪಜಾ/ಪಪಂ ವಿಶೇಷ ಘಟಕದ ೨೦೧೭-೧೮ನೇ ಸಾಲಿನ ಸಲಹಾ ಸಮಿತಿ ಸಭೆಯ ನಡವಳಿಗೆ ಸಭೆ ಅನುಮೋದನೆ ನೀಡಿತು.

ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಕುರಿತಂತೆ ಹೆಚ್ಚಿನ ಅನುದಾನ ಬೇಡಿಕೆಗಾಗಿ ಸರ್ಕಾರದ ಮಾನ್ಯ ಮಂತ್ರಿಗಳಾದ ಶ್ರೀ ಎಚ್.ಆಂಜನೇಯ ಅವರನ್ನು ಭೇಟಿ ಮಾಡಲು ಮತ್ತು ಡಾ. ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಮ್ ನಿಗಮದಿಂದ ಅನುದಾನ ಕೋರಿಕೆ ಕುರಿತು ಚರ್ಚಿಸಲು ಹಾಗೂ ಈ ಕುರಿತಂತೆ ಸದರಿ ಸಂಸ್ಥೆಗಳಿಗೆ ಪತ್ರವನ್ನು ಬರೆಯಲು ಸಭೆ ಸೂಚಿಸಿತು.

೧೯೨.೧೨. **೬ನೇ ವೇತನ ಆಯೋಗದ ಬಾಕಿ ವೇತನ ಪಾವತಿ ಕುರಿತು ಕನ್ನಡ ವಿಶ್ವದ್ಯಾಲಯದ ಅಧ್ಯಾಪಕರ ಸಂಘದ ಮನವಿ ಪತ್ರ ಕುರಿತು.**

ನಿರ್ಣಯ: ೬ನೇ ವೇತನ ಆಯೋಗದ ಬಾಕಿ ವೇತನ ಪಾವತಿ ಕುರಿತು ಕನ್ನಡ ವಿಶ್ವದ್ಯಾಲಯದ ಅಧ್ಯಾಪಕರ ಸಂಘವು ಸಲ್ಲಿಸಿರುವ ಮನವಿ ಕುರಿತು ಸಭೆಯು ಪರಿಶೀಲಿಸಿ ಈ ಕುರಿತಂತೆ ಅಧ್ಯಾಪಕರ ಸಂಘದ ಬೇಡಿಕೆ ಅರ್ಜಿಯೊಂದಿಗೆ ಸರ್ಕಾರಕ್ಕೆ ಪತ್ರಬರೆಯಲು ಸಭೆ ಸೂಚಿಸಿತು

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು